**TET -15-01-2017 Paper - I Child Development & Pedogogy 1-5$^{th}$ Standard**

1. ಮಗುವಿನ ವಿಕಾಸಕ್ಕೆ ಕಾರಣ
(ಎ) ವಯಸ್ಸು ಮತ್ತು ಅನುಭವ
(ಬಿ) ವಯಸ್ಸು ಮತ್ತು ಪಕ್ವತೆ
(ಸಿ) ಪಕ್ವತೆ ಮತ್ತು ಕಲಿಕೆಯ ಅನುಭವ
(ಡಿ) ಪಕ್ವತೆ ಮತ್ತು ಮೈಕಟ್ಟು

2. ಶಿರಪಾದ ವಿಕಾಸದ ತತ್ವ ಎಂದರೆ
(ಎ) ವಿಕಾಸವು ಕೇಂದ್ರ ಭಾಗದಿಂದ ಹೊರಗಿನ ಕಡೆ ಸಾಗುತ್ತದೆ
(ಬಿ) ವಿಕಾಸವು ತಲೆಯ ಕಡೆಯಿಂದ ಕಾಲಿನ ಬೆರಳುಗಳ ಕಡೆ ಸಾಗುತ್ತದೆ
(ಸಿ) ವಿಕಾಸವು ಎಲ್ಲಾ ದಿಕ್ಕಿನಲ್ಲಿ ಸಾಗುತ್ತದೆ
(ಡಿ) ವಿಕಾಸವು ದೇಹದ ಎಲ್ಲಾ ಭಾಗದಲ್ಲಿ ಹರಡುತ್ತದೆ

3. ಮಕ್ಕಳು ತಮ್ಮ ಪರಿಸರದಲ್ಲಿರುವ ವಸ್ತುಗಳನ್ನು ಅರ್ಥೈಸಿಕೊಳ್ಳಲು ಉಪಯೋಗಿಸುವ ಜ್ಞಾನಾತ್ಮಕ ರಚನೆಗಳು
(ಎ) ಸ್ವಾಂಗೀಕರಣ (ಬಿ) ಹೊಂದಾಣಿಕೆ (ಸಿ) ಸ್ಕೀಮ್ (ಡಿ) ಸಮತೋಲನ

4. ವ್ಯಕ್ತಿಯ ಬುದ್ಧಿಶಕ್ತಿಯು ಕೆಳಗಿನ ಅಂಶದ ಪರಿಣಾಮವಾಗಿದೆ.
(ಎ) ಅನುವಂಶೀಯತೆ
(ಬಿ) ಪರಿಸರ
(ಸಿ) ಅನುವಂಶೀಯತೆ & ಪರಿಸರ ಎರಡೂ
(ಡಿ) ಪೌಷ್ಠಿಕತೆ

5. ಒಂದು ಮಗು ತನ್ನ ಸಮ ವಯಸ್ಕರಿಗಿಂತ ಉಚ್ಚಾರಣೆ ಮತ್ತು ಪದ ಸಂಪತ್ತಿನಲ್ಲಿ ಹಿಂದುಳಿದಿದೆ. ಇದರ ಕಾರಣ
(ಎ) ವಿಕಾಸದಲ್ಲಿ ಕೊರತೆ
(ಬಿ) ಪಕ್ವತೆಯ ಕೊರತೆ
(ಸಿ) ಸೂಕ್ತ ಬೆಳವಣಿಗೆ ಇಲ್ಲದೆ ಇರುವುದು
(ಡಿ) ಪೌಷ್ಠಿಕತೆಯ ಕೊರತೆ

6. ಭೌತಿಕ ವಿಕಾಸದ ಪ್ರಕ್ರಿಯೆಯಲ್ಲಿ ಮೊದಲು ಮಗುವಿನ ನಿಯಂತ್ರಣಕ್ಕೆ ಒಳಪಡುವುದು
(ಎ) ಶಿರ (ಬಿ) ತೋಳುಗಳು (ಸಿ) ಕಾಲುಗಳು (ಡಿ) ಹಸ್ತ

7. ಒಂದು ಮಗುವಿನ ವಯಸ್ಸು 8 ವರ್ಷ ಹಾಗೂ ಅವನ ಮಾನಸಿಕ ವಯಸ್ಸು 10. ಹಾಗಾದರೆ ಅವನ ಬುದ್ಧಿಶಕ್ತಿ ಸೂಚ್ಯಾಂಕವು
(ಎ) 150 (ಬಿ) 100 (ಸಿ) 120 (ಡಿ) 125

8. ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಜ್ಞಾನವನ್ನು ಸಹ ರಚಿಸಲಾಗುವುದು ಎನ್ನುವ ಸಿದ್ಧಾಂತ
(ಎ) ವೈಗೋಟ್ಸ್ಕಿರವರ ಸಿದ್ಧಾಂತ
(ಬಿ) ಪಿಯಾಜೆಯವರ ಸಿದ್ಧಾಂತ
(ಸಿ) ಕೋಲ್‌ಬರ್ಗ್‌ರ ಸಿದ್ಧಾಂತ
(ಡಿ) ಬ್ರೂನರ್‌ರವರ ಸಿದ್ಧಾಂತ

9. ಪಿಯಾಜೆಯವರ ಪ್ರಕಾರ ಜ್ಞಾನವಲಯದ ವಿಕಾಸ ಗರಿಷ್ಠ ಮಟ್ಟದಲ್ಲಿ ಆಗುವ ಹಂತ
(ಎ) ಬಾಲ್ಯಾವಸ್ಥೆ (ಬಿ) ಕಿಶೋರಾವಸ್ಥೆ (ಸಿ) ಪ್ರೌಢಾವಸ್ಥೆ (ಡಿ) ವೃದ್ಧಾಪ್ಯ

10. ವಸ್ತುಗಳ ಶಾಶ್ವತತೆ ಸನ್ನಿವೇಶವನ್ನು ಈ ಕೆಳಕಂಡ ಪಿಯಾಜೆಯವರ ಜ್ಞಾನಾತ್ಮಕ ಬೆಳವಣಿಗೆಯಲ್ಲಿ ಕಾಣಬಹುದು
(ಎ) ಪೂರ್ವಕಾರ್ಯ ಹಂತ
(ಬಿ) ಸಂವೇದನಾಗತಿಯ ಹಂತ
(ಸಿ) ಔಪಚಾರಿಕ ಕಾರ್ಯಗಳ ಹಂತ
(ಡಿ) ಮೂರ್ತಕಾರ್ಯಗಳ ಹಂತ

11. ಹಸುಳೆತನ ಹಂತದ ಅವಧಿ
(ಎ) ಜನನದಿಂದ 3 ವರ್ಷಗಳವರೆಗೆ
(ಬಿ) 3 ವರ್ಷಗಳಿಂದ 6 ವರ್ಷಗಳವರೆಗೆ
(ಸಿ) 6 ವರ್ಷಗಳಿಂದ 8 ವರ್ಷಗಳವರೆಗೆ
(ಡಿ) ಗರ್ಭಾವಸ್ಥೆಯಿಂದ ಜನನದವರೆಗೆ

12. ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳು ಸೂಚಿಸುವ ಅಂಶ
(ಎ) ಸ್ಮೃತಿ (ಬಿ) ಸಾಧನೆ (ಸಿ) ಬುದ್ಧಿಶಕ್ತಿ (ಡಿ) ಸೃಜನಶೀಲತೆ

13. ವಿದ್ಯಾರ್ಥಿಗಳ ಕಲಿಕೆಯ ಕಠಿಣತೆಯನ್ನು ಕಂಡುಹಿಡಿಯುವ ಪರೀಕ್ಷೆ
(ಎ) ಸಾಧನಾ ಪರೀಕ್ಷೆ (ಬಿ) ನೈದಾನಿಕ ಪರೀಕ್ಷೆ (ಸಿ) ವೈದ್ಯಕೀಯ ಪರೀಕ್ಷೆ (ಡಿ) ಪ್ರವೇಶ ಪರೀಕ್ಷೆ

14. ಈ ಕೆಳಗಿನವುಗಳಲ್ಲಿ ಒಂದು ಪೂರ್ವ ವಾಕ್ ಶಕ್ತಿಯ ಸಂವಹನವಲ್ಲ
(ಎ) ಅಳುವುದು (ಬಿ) ತೊದಲುವುದು (ಸಿ) ಹಾವಭಾವ (ಡಿ) ವಾಕ್ಯಗಳು

15. ವಿದ್ಯಾರ್ಥಿಯ ಶೈಕ್ಷಣಿಕ ಸಾಧನೆಯನ್ನು ಅಳೆಯಬಹುದಾದ ಪರೀಕ್ಷೆ
(ಎ) ಸಾಧನಾ ಪರೀಕ್ಷೆ (ಬಿ) ವ್ಯಕ್ತಿತ್ವ ಪರೀಕ್ಷೆ (ಸಿ) ಬುದ್ಧಿಶಕ್ತಿ ಪರೀಕ್ಷೆ (ಡಿ) ಅಭಿಕ್ಷಮತೆ ಪರೀಕ್ಷೆ

16. ವಿಶ್ವ ಆರೋಗ್ಯ ಸಂಘಟನೆ (1980)ರ ಪ್ರಕಾರ ಅಶಕ್ತ ಎಂದರೆ
(ಎ) ಕೆಳಮಟ್ಟದ ಸಾಧನೆ
(ಬಿ) ಒಬ್ಬ ವ್ಯಕ್ತಿ ಅನುಭವಿಸುವ ಅನಾನುಕೂಲತೆಗಳು
(ಸಿ) ದೇಹದ ರಚನೆ ಮತ್ತು ಕಾರ್ಯಗಳಲ್ಲಿ ಅಸಾಧಾರಣತೆ
(ಡಿ) ದೃಷ್ಟಿದೋಷ



Scanned by CamScanner

17. ಮಂದಗಾಮಿಯಾಗಿ ಕಲಿಯುವವರ ಬುದ್ಧಿಶಕ್ತಿ ಸೂಚ್ಯಾಂಕವು
(ಎ) 70–90 (ಬಿ) 90–110 (ಸಿ) 110–120 (ಡಿ) 50ಕ್ಕೆ ಮೇಲ್ಪಟ್ಟು
18. ಡಿಸ್‌ಲೆಕ್ಸಿಯಾ ಎಂದರೆ
(ಎ) ಮಾನಸಿಕ ಅಸ್ವಸ್ಥತೆ (ಬಿ) ವರ್ತನಾ ಅಸ್ವಸ್ಥತೆ (ಸಿ) ವಾಚನಾ ಅಸ್ವಸ್ಥತೆ (ಡಿ) ಬರವಣಿಗೆಯ ಅಸ್ವಸ್ಥತೆ
19. ಸೃಜನಶೀಲತೆಯ ಕೊನೆಯ ಹಂತ
(ಎ) ಪ್ರೇರಣೆ / ಸ್ಫೂರ್ತಿ (ಬಿ) ತಾಳಿ ನೋಡುವುದು (ಸಿ) ಏಕ್ಷಣೆ (ಡಿ) ಪರಿಶೀಲನೆ
20. ಮಕ್ಕಳು ಸಾಮಾನ್ಯ ವರ್ತನೆಗಳಿಂದ ಭಿನ್ನವಾಗಿ, ಸಾಮಾಜಿಕ ಅನಪೇಕ್ಷಿತ ರೀತಿಯಲ್ಲಿ ವರ್ತಿಸಿದಾಗ ಅವರು
(ಎ) ಅಪರಾಧಿಗಳು (ಬಿ) ನರವ್ಯಾಧಿಗ್ರಸ್ಥ
(ಸಿ) ಸಾಮಾಜಿಕವಾಗಿ ಹಿಂದುಳಿದವರು (ಡಿ) ಶೈಕ್ಷಣಿಕವಾಗಿ ಹಿಂದುಳಿದವರು
21. ಒಂದು ಮಗು 15 ಸೇಬಿರುವ ಹಣ್ಣಿನ ಬುಟ್ಟಿಯಿಂದ, 8 ಸೇಬು ಹಣ್ಣುಗಳನ್ನು ತೆಗೆದ ನಂತರ, 7 ಹಣ್ಣುಗಳು ಉಳಿದಿವೆ ಎಂದು ಅರ್ಥೈಸಿಕೊಳ್ಳುವುದು. ಇದು ಇದರ ಉದಾಹರಣೆ
(ಎ) ಪಾರ್ಶ್ವ ವರ್ಗಾವಣೆ (ಬಿ) ಅನುಕ್ರಮ ವರ್ಗಾವಣೆ (ಸಿ) ಸಮತಲ ವರ್ಗಾವಣೆ (ಡಿ) ಲಂಬ ವರ್ಗಾವಣೆ
22. ಈ ಕೆಳಗಿನವುಗಳಲ್ಲಿ ಜೈವಿಕ ಅಗತ್ಯತೆ ಅಲ್ಲದಿರುವುದು
(ಎ) ಆಹಾರದ ಅಗತ್ಯತೆ (ಬಿ) ವಿರಾಮದ ಅಗತ್ಯತೆ (ಸಿ) ನಿದ್ದೆಯ ಅಗತ್ಯತೆ (ಡಿ) ಭದ್ರತೆಯ ಅಗತ್ಯತೆ
23. ಕ್ರಿಯಾಜನ್ಯ ವರ್ತನೆಯನ್ನು ಧನಾತ್ಮಕ ಪ್ರಚೋದನೆಯ ಮೂಲಕ ದೃಢಗೊಳಿಸಬಹುದು, ಆದರೆ ಋಣಾತ್ಮಕ ಪುನರ್ ಬಲನವು ದುರ್ಬಲಗೊಳಿಸುತ್ತದೆ. ಇದನ್ನು ಹೇಳಿದವರು.
(ಎ) ಪಾವ್‌ಲೋವ್ (ಬಿ) ಬಂಡೂರ (ಸಿ) ಸ್ಕಿನ್ನರ್ (ಡಿ) ಥಾರ್ನ್‌ಡೈಕ್
24. ಈ ಕೆಳಗಿನವುಗಳಲ್ಲಿ ಒಂದು ತರಗತಿಯ ಪ್ರೇರಣಾ ತಂತ್ರವಲ್ಲದಿರುವುದು
(ಎ) ಶಿಕ್ಷಕ ಕೇಂದ್ರಿತ ಮಾರ್ಗ (ಬಿ) ಮಗು ಕೇಂದ್ರಿತ ಮಾರ್ಗ (ಸಿ) ಸ್ಪರ್ಧೆ ಮತ್ತು ಸಹಕಾರ (ಡಿ) ಬಹುಮಾನ ಮತ್ತು ಶಿಕ್ಷೆ
25. ಅನುವಂಶೀಯತೆಯ ಪ್ರಕಾರ, ಒಂದು ಮಗು ಅನುವಂಶಿಕವಾಗಿ
(ಎ) ತಂದೆ ತಾಯಿಯರಿಂದ ಎಲ್ಲಾ ಪ್ರಬಲ ಗುಣ–ಲಕ್ಷಣಗಳನ್ನು ಪಡೆದುಕೊಳ್ಳುತ್ತದೆ
(ಬಿ) 50% ಪಿತೃವಿನ ಮತ್ತು 50% ಮಾತೃವಿನ ಕಡೆಯಿಂದ
(ಸಿ) 75% ತಾಯಿಯಿಂದ ಮತ್ತು 25% ತಂದೆಯಿಂದ
(ಡಿ) ತಂದೆ ತಾಯಿಯರ ಎಲ್ಲಾ ದುರ್ಬಲ ಗುಣ–ಲಕ್ಷಣಗಳು
26. ಅನಾರೋಗ್ಯಕರ ಮನೋಧೋರಣೆ, ಮೂಢನಂಬಿಕೆ ಮತ್ತು ಭಯ ಇವುಗಳನ್ನು ತೊಡೆದುಹಾಕಲು ಬಳಸಬಹುದಾದ ಸಿದ್ಧಾಂತ
(ಎ) ಪ್ರಯತ್ನ ಮತ್ತು ದೋಷ ಕಲಿಕೆ (ಬಿ) ಒಳನೋಟ ಕಲಿಕೆ
(ಸಿ) ಕ್ರಿಯಾಜನ್ಯ ಅನುಬಂಧನ (ಡಿ) ಸಾಂಪ್ರದಾಯಿಕ ಅನುಬಂಧನ
27. ಈ ಕೆಳಗಿನವುಗಳಲ್ಲಿ ಕ್ರಿಯಾಜನ್ಯ ಅನುಬಂಧನಕ್ಕೆ ಸೇರದೆ ಇರುವುದು
(ಎ) ರೂಪಿಸುವಿಕೆ (ಬಿ) ಅಳಿಸಿ ಹೋಗುವಿಕೆ
(ಸಿ) ಸ್ವಾಭಾವಿಕವಾಗಿ ಪುನಃ ಪಡೆದುಕೊಳ್ಳುವುದು (ಡಿ) ಪ್ರಚೋದನೆ ಇಲ್ಲ – ಪ್ರತಿಕ್ರಿಯೆ ಇಲ್ಲ
28. ಒಳನೋಟ ಕಲಿಕೆಯಲ್ಲಿ ಬಳಸದೇ ಇರುವ ಮಾರ್ಗ
(ಎ) ಪ್ರಯತ್ನ–ದೋಷ ಕಲಿಕೆ (ಬಿ) ಸಮಸ್ಯೆ ಪರಿಹಾರ (ಸಿ) ಇಡೀಯಿಂದ ಬಿಡಿಯ ಕಡೆಗೆ (ಡಿ) ಸಮಗ್ರವಾಗಿಸುವುದು
29. ಕಲಿಕೆಯ ಪ್ರಕ್ರಿಯೆಯಲ್ಲಿ, ಪ್ರತಿಕ್ರಿಯೆಯು ಹೆಚ್ಚು ಸಂಭವನೀಯವಾಗಿ ಪುನರ್‌ಬಲನದ ಮೂಲಕ ಆಗುವುದು
(ಎ) ಸಾಂಪ್ರದಾಯಿಕ ಅನುಬಂಧನದಲ್ಲಿ (ಬಿ) ಕ್ರಿಯಾಜನ್ಯ ಅನುಬಂಧನದಲ್ಲಿ
(ಸಿ) ಪ್ರಯತ್ನ ಮತ್ತು ದೋಷ ಕಲಿಕೆಯಲ್ಲಿ (ಡಿ) ಒಳನೋಟ ಕಲಿಕೆಯಲ್ಲಿ
30. ಮಕ್ಕಳು ತಂದೆ–ತಾಯಿಯರನ್ನು ಹೋಲುತ್ತಾರೆ. ಇದು ಇದರ ಉದಾಹರಣೆ
(ಎ) ಸಾಮ್ಯತೆಯ ನಿಯಮ (ಬಿ) ಭಿನ್ನತೆಯ ನಿಯಮ (ಸಿ) ದುರ್ಬಲ ನಿಯಮ (ಡಿ) ಪ್ರಬಲ ನಿಯಮ

**ಕೀ – ಉತ್ತರಗಳು**

| | | | | | |
|---|---|---|---|---|---|
| 1 | ಸಿ | 11 | ಡಿ | 21 | ಸಿ |
| 2 | ಬಿ | 12 | ಸಿ | 22 | ಎ |
| 3 | ಸಿ | 13 | ಎ | 23 | ಡಿ |
| 4 | ಸಿ | 14 | ಬಿ | 24 | ಬಿ |
| 5 | ಬಿ | 15 | ಸಿ | 25 | ಸಿ |
| 6 | ಎ | 16 | ಡಿ | 26 | ಸಿ |
| 7 | ಡಿ | 17 | ಸಿ | 27 | ಸಿ |
| 8 | ಎ | 18 | ಸಿ | 28 | ಬಿ |
| 9 | ಬಿ | 19 | ಡಿ | 29 | ಡಿ |
| 10 | ಬಿ | 20 | ಸಿ | 30 | ಸಿ |



Scanned by CamScanner

**TET - 2015 Paper -I Child Development & Pedogogy 1-5th Standard**

1. ವಿಕಾಸದ ಅರ್ಥ :-
(a) ಎತ್ತರ ಮತ್ತು ತೂಕದಲ್ಲಿ ಹೆಚ್ಚಳ
(b) ಜೀವನ ಪರ್ಯಂತ, ಕ್ರಮಬದ್ಧ ಹಾಗೂ ಪ್ರಗತಿಪರ ಬದಲಾವಣೆ
(c) ಚಿಕ್ಕವನು ವಯಸ್ಕನಾಗುವುದು
(d) ವಯಸ್ಕ ಮುದುಕನಾಗುವುದು

2. ಒಂದು ಮಗುವಿನ ಆರಂಭಿಕ ವಿಕಾಸವು ಆಧರಿಸಿರುವ ತತ್ವ
(a) ಸಮತಲ – ನೇರಾಭಿಮುಖಿ
(b) ಶಿರ – ಪದಾಭಿಮುಖಿ
(c) ಕೇಂದ್ರ – ಸಮತಲ ಅಭಿಮುಖಿ
(d) ಲಂಬ ನೋಟ–ಸೀಳು ನೋಟಾಭಿಮುಖಿ

3. ಸಾಮಾಜಿಕ ರೀತಿ –ನೀತಿಗಳನ್ನು, ಮೌಲ್ಯಗಳನ್ನು, ಆಚಾರ –ವಿಚಾರ, ಸಂಪ್ರದಾಯ ಮುಂತಾದವುಗಳನ್ನು ಮೈಗೂಡಿಸಿಕೊಳ್ಳುವ ಕ್ರಿಯೆಯನ್ನು ಹೀಗೆಕರೆಯುವರು
(a) ಸಾಮಾನ್ಯೀಕರಣ (b) ಸಾದೃಶೀಕರಣ
(c) ನಾಗರಿಕೀಕರಣ (d) ಸಾಮಾಜೀಕರಣ

4. ಜ್ಞಾನಾತ್ಮಕ ವಿಕಾಸದ ಹಂತಗಳ ಜೊತೆ ಜೋಡಣೆಗೊಂಡಿರುವ ಹೆಸರು–
(a) ಪಿಯಾಜೆ (b) ಹ್ಯಾವಿಗ್ ಹರ್ಸ್ಟ್
(c) ಗಾರ್ಡನರ್ (d) ಎರಿಕ್‌ಸನ್

5. ವೈಯಕ್ತಿಕ ವಿಭಿನ್ನತೆಗೆ ಕಾರಣವಾದ ಅಂಶಗಳು
(a) ಆಹಾರ ಮತ್ತು ಪೌಷ್ಟಿಕಾಂಶ (b) ವಿವಿಧ ಸಮುದಾಯಗಳು
(c) ವಿವಿಧ ಸಂಸ್ಕೃತಿಗಳು (d) ಅನುವಂಶೀಯತೆ ಮತ್ತು ಪರಿಸರ

6. ಕೆಳಕಂಡ ಈ ಮನೋವಿಜ್ಞಾನಿ ರೂಪಿಸಿರುವ ಏಳು ಬುದ್ಧಿಶಕ್ತಿಗಳಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿ ಒಂದು ಅಂಶವಾಗಿಲ್ಲ.
(a) ಬೀನೆ (b) ವೆಸ್ಲರ್
(c) ಗಾರ್ಡನರ್ (d) ಸ್ಪೆನ್ಸರ್

7. ಮಾನಸಿಕ ವಯಸ್ಸು (M.A.) ಎಂಬ ಪರಿಕಲ್ಪನೆಯನ್ನು ನೀಡಿದವರು
(a) ಥರ್ಸ್ಟನ್ (b) ಟರ್ಮನ್
(c) ಮೆರಿಲ್ (d) ಬೀನೆ

8. ಒಬ್ಬ 5 ವರ್ಷ ವಯಸ್ಸಿನ ಬಾಲಿಕೆಯ ಮಾನಸಿಕ ವಯಸ್ಸು 6 ಆಗಿದ್ದರೆ, ಆಗ ಆಕೆಯ ಬುದ್ಧಿಸೂಚ್ಯಾಂಕ.
(a) 100 (b) 110
(c) 120 (d) 130

9. ಸೃಜನಶೀಲ ಮಗುವಿನ ಪ್ರಮುಖ ಲಕ್ಷಣಗಳು
(a) ಒಮ್ಮುಖಿ ಆಲೋಚನೆ, ಉತ್ತಮ ಸ್ಮೃತಿ (b) ಹೊಸತನ ಸ್ವಂತಿಕೆ
(c) ಉತ್ತಮ ಸ್ಮೃತಿ , ವಿಶೇಷ ಪ್ರತಿಭೆ (d) ಹೊಸತನ, ಒಮ್ಮುಖಿ ಆಲೋಚನೆ

10. ಸ್ವಾಯತ್ತತೆ ವಿರುದ್ಧ ನಾಚಿಕೆ ಮತ್ತು ಸಂಶಯ' ಎಂಬುದು ಮನೋ – ಸಾಮಾಜಿಕ ಬೆಳವಣಿಗೆ ಸಿದ್ಧಾಂತದ ಹಂತಗಳಲ್ಲಿ ಒಂದಾಗಿದ್ದು, ಇದನ್ನು ನೀಡಿದವರು.
(a) ಎರಿಕ್ ಎರಿಕ್‌ಸನ್
(b) ರೇಮಂಡ್ ಕೆಟಲ್
(c) ಸಿಗ್ಮಂಡ್ ಫ್ರಾಯ್ಡ್
(d) ಫ್ರೀಡ್‌ಮನ್ ಮತ್ತು ರೋಸೆನ್‌ಮನ್



Scanned by CamScanner

11. ವಿದ್ಯಾರ್ಥಿಗಳ ವೈಯಕ್ತಿಕ ವಿಭಿನ್ನತೆಗಳನ್ನು ಸರಿದೂಗಿಸಲು ಒಬ್ಬ ಶಿಕ್ಷಕನಾದವನು

(a) ವಿದ್ಯಾರ್ಥಿಗಳ ಸಾಮರ್ಥ್ಯಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸಬೇಕು

(b) ವಿದ್ಯಾರ್ಥಿಗಳ ವೈಯಕ್ತಿಕ ಅಗತ್ಯಗಳಿಗೆ ಅನುಗುಣವಾಗಿ ಶಿಕ್ಷಕನು ತನ್ನ ಬೋಧನಾ ಕೌಶಲಗಳನ್ನು ಹೊಂದಿಸಿಕೊಳ್ಳಬೇಕು

(c) ವಿದ್ಯಾರ್ಥಿಗಳನ್ನು ಅವರ ಸಾಮರ್ಥ್ಯಗಳಿಗೆ ಅನುಗುಣವಾಗಿ ವಿಂಗಡಿಸಿ ಬೋಧಿಸಬೇಕು

(d) (1) ಮತ್ತು (2) ಎರಡೂ

12. ಕೆಳಕಂಡ ಯಾವುದು ರೂಪಣಾತ್ಮಕ ಮೌಲ್ಯಮಾಪನ ಪದ್ಧತಿಯಲ್ಲ?

a) ಬಹು ಆಯ್ಕೆ ಪ್ರಶ್ನೆಗಳು | b) ಮೌಖಿಕ ಪರೀಕ್ಷೆಗಳು

c) ಪ್ರಾಜೆಕ್ಟ್‌ಗಳು | d) ಸಂಭಾಷಣೆ ಕೌಶಲ

13. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕಲಿಸುವುದು

(a) ಉನ್ನತ ತರಗತಿ ವಿದ್ಯಾರ್ಥಿಗಳ ಜೊತೆ ಕೂರಿಸಿ

(b) ಕೆಳಹಂತದ ತರಗತಿ ವಿದ್ಯಾರ್ಥಿಗಳ ಜೊತೆ ಕೂರಿಸಿ

(c) ಅವರ ಅನುಕೂಲಗಳಿಗೆ ಅನುಗುಣವಾಗಿ

(d) ವಿಷಯ ಸಮೃದ್ಧವಾದ ಬೋಧನಾ ಕಾರ್ಯಕ್ರಮಗಳೊಂದಿಗೆ

14. ನೈದಾನಿಕ ಪರೀಕ್ಷೆಗಳನ್ನು ಶಾಲೆಯಲ್ಲಿ ಬಳಸುವುದು

(a) ಶೈಕ್ಷಣಿಕ ಸಮಸ್ಯೆಗಳಿಗೆ ಕಾರಣಗಳನ್ನು ಪತ್ತೆ ಹಚ್ಚಲು

(b) ಆರೋಗ್ಯ ಸಮಸ್ಯೆಗಳಿಗೆ ಕಾರಣಗಳನ್ನು ಗುರ್ತಿಸಲು

(c) ವರ್ತನಾ ಸಮಸ್ಯೆಗಳಿಗೆ ಕಾರಣಗಳನ್ನು ಪತ್ತೆ ಹಚ್ಚಲು

(d) ಪಠ್ಯೇತರ(ಸಹಪಠ್ಯ)ಚಟುವಟಿಕೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಗುರ್ತಿಸಲು

15. ಅಂಗವಿಕಲ ಮಕ್ಕಳಿಗಾಗಿ ಇರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹೀಗೂ ಕರೆಯುವರು.

(a) ಔಪಚಾರಿಕ ಶಿಕ್ಷಣ | (b) ಅನೌಪಚಾರಿಕ ಶಿಕ್ಷಣ

( c) ದೂರ ಶಿಕ್ಷಣ | (d) ವಿಶೇಷ ಶಿಕ್ಷಣ

16.ಪೂರ್ವ ಪ್ರಾಥಮಿಕ ಶಿಕ್ಷಣ ಕುರಿತು ಮರಿಯಾ ಮಾಂಟೆಸೋರಿ ಮಾಡಿರುವ ಸಾಧನೆಯ ಮೇಲೆ ಪ್ರಭಾವ ಬೀರಿದವರು

( a) ಫ್ರೋಬೆಲ್ | (b) ರುಡಾಲ್ಫ್ ಸ್ಟೈಯ್ನರ್

(c) ನಾರ್ಮನ್ ಬ್ರೋಸ್ಟೆರ್‌ಮನ್ | (d) ಜಾನ್ ಡ್ಯೂಯಿ

17. ತನ್ನ ತಮ್ಮ ಅಥವಾ ತಂಗಿ ಬಗ್ಗೆ ಮಾತ್ಸರ್ಯ ಹೊಂದಿರುವ ಹಿರಿಯ ಮಗು ತನ್ನ ತಂದೆ –ತಾಯಿಯರ ಗಮನ ಸೆಳೆಯಲು ಬೆರಳು ಚೀಪುವುದು, ಹಾಸಿಗೆಯಲ್ಲಿ ಮೂತ್ರ ಮಾಡಿಕೊಳ್ಳುವುದು, ಮುಂತಾದ ಎಳೆಯ ವಯಸ್ಸಿನ ಮಕ್ಕಳ ನಡವಳಿಕೆಯನ್ನು ಪ್ರದರ್ಶಿಸುತ್ತದೆ. ಇಂತಹ ಲಕ್ಷಣಗಳ ರಕ್ಷಣಾ ತಂತ್ರವು

(a) ಪ್ರಕ್ಷೇಪಣೆ (ಬಾಹ್ಯಾರೋಪಣೆ) | (b) ತಾರ್ಕಿಕ ವಾದ

(c) ಪ್ರಗತಿಮನ ( ಪಲಾಯನ) | (d) ಬದಲಿ ಉಪಾಯ

18. ಒಂದು ಮಗು 16 ಮತ್ತು 61 ರ ನಡುವೆ, b ಮತ್ತು d ನಡುವೆ, ಇತ್ಯಾದಿ ಗೊಂದಲಕ್ಕೆ ಒಳಗಾಗುತ್ತದೆ. ಆ ಮಗುವಿನಲ್ಲಿರಬಹುದಾದ ನ್ಯೂನತೆ ಅಥವಾ ದೋಷ.

(a) ಕಲಿಕಾ ನ್ಯೂನತೆ | (b) ದೈಹಿಕ ನ್ಯೂನತೆ

(c) ದೃಷ್ಟಿ ನ್ಯೂನತೆ | (d) ಮಾನಸಿಕ ನ್ಯೂನತೆ (ವಿಕಲತೆ)

19. ಪರಿಣಾಮಕಾರಿ ಕಲಿಕೆಗೆ ಪೂರಕವಾದ ಅಂಶ(ಗಳು) :

(a) ಆರೋಗ್ಯ | (b) ಪ್ರೇರಣೆ

(c) ಕಲಿಯಬೇಕೆಂಬ ಹಂಬಲ | (d) ಮೇಲಿನ ಎಲ್ಲವೂ

20. ಜ್ಞಾನಾತ್ಮಕ ಬೆಳವಣಿಗೆಯನ್ನು ಹೀಗೂ ಕರೆಯುವರು

(a) ಸಂವೇಗಾತ್ಮಕ ಬೆಳವಣಿಗೆ | (b) ಬೌದ್ಧಿಕ ಬೆಳವಣಿಗೆ

(c) ನೈತಿಕ ಬೆಳವಣಿಗೆ | (d) ಸಾಮಾಜಿಕ ಬೆಳವಣಿಗೆ

21. ಒಬ್ಬ ಬುದ್ಧಿವಂತ ವಿದ್ಯಾರ್ಥಿ ಕಲಿಕೆಯಲ್ಲಿ ಹಿಂದುಳಿದಿದ್ದಾಗ ಶಿಕ್ಷಕನಾದವನು ಕೈಗೊಳ್ಳಬೇಕಾದ ಕ್ರಮ (ಗಳು):

a) ಆತನಿಗೆ ಹೆಚ್ಚು ಓದುವ ಕೆಲಸ ಕೊಟ್ಟು ಶ್ರಮಪಟ್ಟು ಓದುವಂತೆ ಮಾಡುವುದು

b) ಆತನಿಗೆ ವೈಯಕ್ತಿಕ ಗಮನ ನೀಡುವುದು ಮತ್ತು ವಿಶೇಷ ಬೋಧನೆ ಆರಂಭಿಸುವುದು

c) ಆತನ ಕಳಪೆ ಸಾಧನೆಗೆ ಕಾರಣಗಳನ್ನು ಪತ್ತೆ ಹಚ್ಚಿ ಪರಿಹಾರ ಬೋಧನೆ ನೀಡುವುದು

d) ಆತನಿಗೆ ಮನೆಪಾಠ ವ್ಯವಸ್ಥೆ ಮಾಡುವಂತೆ ಪೋಷಕರಿಗೆ ಹೇಳುವುದು



Scanned by CamScanner

22. 'ವಿಕಾಸ ಕಾರ್ಯಗಳು' ಎಂಬ ಪರಿಕಲ್ಪನೆಯನ್ನು ಮೊದಲು ಪರಿಚಯಿಸಿದವರು

(a) ಎಲಿಜಬೆತ್ ಹರ್ಲಾಕ್ (b) ರಾಬರ್ಟ್ ಹ್ಯಾವಿಗ್‌ಹರ್ಸ್ಟ್

(c) ಕಾರ್ಲ್ ರೋಜರ್ಸ್ (d) ಕಾರ್ಲ್ ಝೂಂಗ್

23. ಡೇನಿಯಲ್ ಗೋಲ್‌ಮನ್ ಈ ಪರಿಕಲ್ಪನೆಯನ್ನು ಪ್ರಸಿದ್ಧಗೊಳಿಸಿದನು

(a) ಬಹು ಬುದ್ಧಿಶಕ್ತಿ (b) ಕೃತಕ ಬುದ್ಧಿಶಕ್ತಿ

(c) ಸಂವೇಗಾತ್ಮಕ ಬುದ್ಧಿಶಕ್ತಿ (d) ಸಾಮಾಜಿಕ ಬುದ್ಧಿಶಕ್ತಿ

24. ಕೆಳಕಂಡ ಯಾವ ಪರೀಕ್ಷೆಯಲ್ಲಿ ಅಸ್ಪಷ್ಟ ಪ್ರಚೋದನೆಗಳನ್ನು ನೀಡಲಾಗುವುದು?

(a) ಬುದ್ಧಿಶಕ್ತಿ ಪರೀಕ್ಷೆಗಳು (b) ಅಭಿಕ್ಷಮತೆ ಪರೀಕ್ಷೆಗಳು

(c) ಪ್ರಕ್ಷೇಪಣೆ ಪರೀಕ್ಷೆಗಳು (d) ಆಸಕ್ತಿ ತಪಶೀಲು ಪಟ್ಟಿ

25. ಸಂಚಾರಿ ಸಂಕೇತಗಳ ಪಾಲನೆಯು ಸಂಬಂಧಪಟ್ಟಿರುವುದು

(a) ಅನುಬಂಧಿತ ಕಲಿಕೆಗೆ (b) ಪ್ರಯತ್ನ– ಪ್ರಮಾದ ಕಲಿಕೆಗೆ

(c) ಒಳನೋಟ ಕಲಿಕೆಗೆ (d) ಕಲಿಕೆ ವರ್ಗಾವಣೆಗೆ

26. ಒಳಗೊಳ್ಳುವ ಶಿಕ್ಷಣ ಪ್ರಮುಖ ಉದ್ದೇಶ

a) ವಿಶೇಷ ಮಕ್ಕಳ ಅಗತ್ಯತೆಯನ್ನು ಪೂರೈಸುವುದು (b) ಪ್ರತಿಭಾವಂತ ಮಕ್ಕಳ ಅಗತ್ಯತೆಗಳನ್ನು

c) ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಅಗತ್ಯತೆಗಳನ್ನು ಪೂರೈಸುವುದು (d) ಎಲ್ಲ ಮಕ್ಕಳ ಅಗತ್ಯತೆಗಳನ್ನು ಪೂರೈಸುವುದು

27. ವಾರ್ಷಿಕ ಪರೀಕ್ಷೆಗಳನ್ನು ನಡೆಸುವುದು

(a) ನಿರಂತರ ಮೌಲ್ಯಮಾಪನ (b) ಕಲಿಕೆಗಾಗಿ ಮೌಲ್ಯಮಾಪನ

(c) ಕಲಿಕೆಯ ಮೌಲ್ಯಮಾಪನ (d) ವ್ಯಾಪಕ ಮೌಲ್ಯಮಾಪನ

28. ಒಬ್ಬ ಶಿಕ್ಷಕನಾದವನು ಸಂಪನ್ಮೂಲಭರಿತನಾಗಿರಬೇಕು ಎಂಬುದರ ಅರ್ಥ

(a) ಆತ ಶ್ರೀಮಂತನಾಗಿರಬೇಕು ಆದ್ದರಿಂದ ಆತ ಮನೆಪಾಠ ಮಾಡುವ ಅಗತ್ಯವಿರುವುದಿಲ್ಲ

(b) ಆತ ಪ್ರಭಾವಶಾಲಿಯಾಗಿರಬೇಕು ಆದ್ದರಿಂದ ಆತನಿಗೆ ಯಾರೂ ತೊಂದರೆ ನೀಡಲಾರರು

(c) ಆತ ತನ್ನ ವಿದ್ಯಾರ್ಥಿಗಳಲ್ಲಿ ತುಂಬಾ ಪ್ರಸಿದ್ಧನಾಗಿವುರುವುದರಿಂದ ಆತನ ಮೇಲೆ ಮೇಲಧಿಕಾರಿಗಳು ಯಾವುದೇ ದಂಡನಾ ಕ್ರಮವಿ ಧಿಸಲಾಗುವುದಿಲ್ಲ

(d) ಆತನು ಸಾಕಷ್ಟು ಜ್ಞಾನ ಹಾಗೂ ಕೌಶಲಗಳನ್ನು ಹೊಂದಿದ್ದು ವಿದ್ಯಾರ್ಥಿಗಳ ಆವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುವುದು

29. ಒಬ್ಬ ಶಿಕ್ಷಕನಾಗಿ ವಿದ್ಯಾರ್ಥಿಗಳನ್ನು ಪ್ರೇರೇಪಿಸಲು ಯಾವ ತಂತ್ರಗಳನ್ನು ಅನುಸರಿಸುವಿರಿ?

(a) ಪಾಠ ಬೋಧನೆ ಆರಂಭದಲ್ಲಿ ಸೂಕ್ತ ಪೀಠಿಕೆ ನೀಡುವುದು

(b)ಬೋಧಿಸುವಾಗ ಸೂಕ್ತ ಉದಾಹರಣೆಗಳನ್ನು ನೀಡುವುದು

(c) ವಿದ್ಯಾರ್ಥಿಗಳು ಕಲಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು

(d) ಮೇಲಿನ ಎಲ್ಲವೂ

30. ಕೆಳಕಂಡ ಯಾವ ಪ್ರೇರಣೆಗಳನ್ನು ಪ್ರಾಥಮಿಕ ಪ್ರೇರಣೆಗಳೆಂದು ಪರಿಗಣಿಸಲಾಗಿದೆ?

(a) ಶಾರೀರಿಕ ಪ್ರೇರಣೆಗಳು (b) ಸಾಮಾಜಿಕ ಪ್ರೇರಣೆಗಳು

(c) ಉತ್ತೇಜಕಗಳು (d) ಬಹುಮಾನ ಮತ್ತು ಶಿಕ್ಷೆ (ಹೊಗಳಿಕೆ & ತೆಗಳಿಕೆ)

**ಕೀ – ಉತ್ತರಗಳು**

| | | | | | |
|---|---|---|---|---|---|
| 1 | ಡಿ | 11 | ಡಿ | 21 | ಡಿ |
| 2 | ಡಿ | 12 | ಸಿ | 22 | ಸಿ |
| 3 | ಸಿ | 13 | ಸಿ | 23 | ಬಿ |
| 4 | ಎ | 14 | ಬಿ | 24 | ಎ |
| 5 | ಸಿ | 15 | ಎ | 25 | ಬಿ |
| 6 | ಬಿ | 16 | ಬಿ | 26 | ಡಿ |
| 7 | ಎ | 17 | ಸಿ | 27 | ಸಿ |
| 8 | ಡಿ | 18 | ಎ | 28 | ಡಿ |
| 9 | ಎ | 19 | ಬಿ | 29 | ಬಿ |
| 10 | ಬಿ | 20 | ಡಿ | 30 | ಸಿ |



Scanned by CamScanner

**TET - 2014 Paper -I Child Development & Pedogogy 1-5th Standard**

1. ಮಗುವಿನಲ್ಲಿ ವಿಕಾಸದ ಬೆಳವಣಿಗೆಗಳು ಕಂಡುಬರಲು ಕಾರಣ
(ಎ) ಅನುವಂಶೀಯ ಕಾರಣಗಳು (ಬಿ) ಪರಿಸರದ ಅಂಶಗಳು
(ಸಿ) ಅನುವಂಶೀಯ ಮತ್ತು ಪರಿಸರದ ಅಂಶಗಳ ಅಂತರ್‌ಕ್ರಿಯೆ (ಡಿ) ಪೌಷ್ಟಿಕ ಅಂಶಗಳು

2. ಪಿಯಾಜೆಯವರ ಪ್ರಕಾರ ಜ್ಞಾನಾತ್ಮಕ ವಿಕಾಸದ ಪ್ರಕ್ರಿಯೆಯಲ್ಲಿ ಪ್ರಕಲ್ಪನೆ ರೂಪಿಸುವ ಮತ್ತು ಪ್ರಯೋಗ ಮಾಡುವ ಸಾಮರ್ಥ್ಯ ಇಲ್ಲಿ ಕಾಣಬರುತ್ತದೆ.
(ಎ) ಸಂವೇದನಾ ಗತಿ ಹಂತ (ಬಿ) ಮೂರ್ತ ಕಾರ್ಯಗಳ ಹಂತ
(ಸಿ) ಔಪಚಾರಿಕ ಕಾರ್ಯಗಳ ಹಂತ (ಡಿ) ಕಾರ್ಯಪೂರ್ವ ಹಂತ

3. ಬೌದ್ಧಿಕ ಕೊರತೆ ಕಂಡುಬರುವ ಬುದ್ಧಿಶಕ್ತಿ ಸೂಚ್ಯಂಕದ ವ್ಯಾಪ್ತಿ
(ಎ) 0–25 (ಬಿ) 0–30 (ಸಿ) 25–50 (ಡಿ) 0–70

4. ಬುದ್ಧಿಶಕ್ತಿಯ ಮೂರು ಆಯಾಮಗಳ ಮಾದರಿಯನ್ನು ರೂಪಿಸಿದವರು
(ಎ) ಕೆಟಲ್ (ಬಿ) ಥರ್ಸ್ಟೋನ್ (ಸಿ) ಗಿಲ್ ಫೋರ್ಡ್ (ಡಿ) ಟರ್ಮನ್

5. ಬುದ್ಧಿಶಕ್ತಿ ಎನ್ನುವುದು
(ಎ) ಭಾವನಾತ್ಮಕ ಸಾಮರ್ಥ್ಯ (ಬಿ) ಆಲೋಚನಾ ಸಾಮರ್ಥ್ಯ (ಸಿ) ಜ್ಞಾನಾತ್ಮಕ ಸಾಮರ್ಥ್ಯ (ಡಿ) ಚಾಲನಾ ಸಾಮರ್ಥ್ಯ

6. ಒಬ್ಬ ಬುದ್ಧಿಮಾಂದ್ಯ ಮಗುವಿನ ಅವಧಾನ ಅವಧಿಯು ಕಡಿಮೆ ಇರುತ್ತದೆ. ಏಕೆಂದರೆ
(ಎ) ಮಗುವನ್ನು ಗಮನಿಸಲು ಶಿಕ್ಷಕರಿಗೆ ಸ್ವಲ್ಪ ಸಮಯ ಲಭ್ಯವಿರುವುದು (ಬಿ) ಮಗು ಬಹಳ ತುಂಟನಾಗಿರುವುದು
(ಸಿ) ಅವನ ಸ್ನೇಹಿತರು ಅಡ್ಡಿಪಡಿಸುವರು (ಡಿ) ಹುಟ್ಟಿನಿಂದ ಬಂದ ಗುಣಗಳು

7. ಒಳನೋಟ ಕಲಿಕೆಯ ಮುಖ್ಯವಾದ ಗುಣಲಕ್ಷಣವು
(ಎ) ತಕ್ಷಣ ವಿಚಾರ ಹೊಳೆಯುವುದು (ಬಿ) ಸ್ವಯಂ ಕಲಿಕೆ
(ಸಿ) ಸಂಕಷ್ಟ ಪರಿಹರಿಸುವುದು (ಡಿ) ದೃಷ್ಟಿಕೋನ ವೃದ್ಧಿಪಡಿಸುವುದು

8. ಪ್ರತಿಭಾವಂತ ಮಕ್ಕಳು ಯಾವಾಗಲೂ ಎದುರು ನೋಡುವುದು
(ಎ) ಪ್ರಯೋಗಾಲಯದಲ್ಲಿ ಕೆಲಸ ಮಾಡುವುದು (ಬಿ) ಗ್ರಂಥಾಲಯಗಳಲ್ಲಿ ಅಭ್ಯಸಿಸುವುದು
(ಸಿ) ಇತರರನ್ನು ಗೆಲ್ಲಲು ಅವಕಾಶಗಳು (ಡಿ) ವಿನೂತನ ಕಾರ್ಯಗಳು

9. ಒಬ್ಬ ಹುಡುಗನ ಮಾನಸಿಕ ವಯಸ್ಸು (MA) 8 ಹಾಗೂ ದೈಹಿಕ ವಯಸ್ಸು(CA) 10 ಹಾಗಿದ್ದರೆ ಆತನ ಬುದ್ಧಿ ಸೂಚ್ಯಂಕವು (IQ) ಎಷ್ಟು?
(ಎ) 125 (ಬಿ) 100 (ಸಿ) 80 (ಡಿ) 120

10. ಒಬ್ಬ ಬಾಲಕಿ ಸಂಗೀತದಲ್ಲಿ ಪ್ರಾವಿಣ್ಯ ಪಡೆಯುವುದು ಇದಕ್ಕೆ ಉದಾಹರಣೆಯಾಗಿದೆ.
(ಎ) ಧನಾತ್ಮಕ ಮನೋಭಾವ (ಬಿ) ಕುತೂಹಲ (ಸಿ) ಆಂತರಿಕ ಅಭಿಪ್ರೇರಣೆ (ಡಿ) ಆಸಕ್ತಿ

11. ಭಾಷಾ ಬೆಳವಣಿಗೆಯಲ್ಲಿ ಮೌಖಿಕ ಅಭಿವ್ಯಕ್ತಿ ಮತ್ತು ಒತ್ತು ಕೊಡುವಿಕೆಯ ಅಂಶಗಳನ್ನು ಈ ಮೂಲಕ ಗಳಿಸಬಹುದಾಗಿದೆ.
(ಎ) ಒಗ್ಗೂಡಿಸುವಿಕೆ (ಬಿ) ಒಳನೋಟ (ಸಿ) ಅನುಬಂಧಿತತೆ (ಡಿ) ಅನುಕರಣೆ

12. ಅಭ್ಯಾಸ ನಿಯಮದಲ್ಲಿ ಇತರ ವಸ್ತುಗಳು ಸಮನಾಗಿದ್ದು ಎಂಬ ನುಡಿಗಟ್ಟು ಇವುಗಳಿಗೆ ಸಂಬಂಧಪಟ್ಟಿದೆ.
(ಎ) ಪರಿಣಾಮ ಮತ್ತು ಸಿದ್ಧತೆ (ಬಿ) ಉಪಯೋಗ ಮತ್ತು ನಿರುಪಯೋಗ
(ಸಿ) ತಾಜಾ ಮತ್ತು ತೀವ್ರ (ಡಿ) ಪ್ರಚೋದನೆ ಮತ್ತು ಪ್ರತಿಕ್ರಿಯೆ

13. ಪರಿಣಾಮ ನಿಯಮವು ಒತ್ತಿ ಹೇಳುವುದು
(ಎ) ಬಹುಮಾನಗಳನ್ನು ಮಾತ್ರ (ಬಿ) ಶಿಕ್ಷೆಗಳನ್ನು ಮಾತ್ರ
(ಸಿ) ಬಹುಮಾನ ಮತ್ತು ಶಿಕ್ಷೆ ಎರಡನ್ನೂ (ಡಿ) ಬಹುಮಾನ ಮತ್ತು ಶಿಕ್ಷೆ ಎರಡೂ ಅಲ್ಲ

14. ಮಾನಸಿಕ ಕೌಶಲ್ಯ ಮತ್ತು ತಿಳುವಳಿಕೆಯ ಪರೀಕ್ಷೆಯನ್ನು ಮಾಡುವಲ್ಲಿ ಮೌಲಿಕವಾದ ಪರೀಕ್ಷೆ
(ಎ) ಬಹು ಆಯ್ಕೆ ಮಾದರಿ ಪರೀಕ್ಷೆಗಳು (ಬಿ) ಹೊಂದಿಸಿ ಬರೆಯುವ ಪರೀಕ್ಷೆಗಳು
(ಸಿ) ಪ್ರಬಂಧ ಮಾದರಿ ಪರೀಕ್ಷೆಗಳು (ಡಿ) ಪೂರ್ಣಗೊಳಿಸುವ ಮಾದರಿ ಪರೀಕ್ಷೆಗಳು

15. ವಸ್ತುನಿಷ್ಠ ಮಾದರಿ ಪರೀಕ್ಷೆಗಳು ಲಘು ಮಾದರಿ ಪರೀಕ್ಷೆಗಳಿಗಿಂತ ಹೆಚ್ಚು ಆದ್ಯತೆ ಪಡೆದಿವೆ. ಏಕೆಂದರೆ?
(ಎ) ವ್ಯಕ್ತಿನಿಷ್ಠತೆಯನ್ನು ಕಡಿಮೆ ಮಾಡುತ್ತವೆ (ಬಿ) ರಚನೆ ಮಾಡುವಲ್ಲಿ ಸುಲಭವಾಗಿವೆ
(ಸಿ) ವಿದ್ಯಾರ್ಥಿಗಳು ಇಷ್ಟಪಡುತ್ತಾರೆ (ಡಿ) ಸುಲಭವಾಗಿ ಹೆಚ್ಚು ಅಂಕ ಗಳಿಸಬಹುದು

16. ಒಬ್ಬ ವ್ಯಕ್ತಿ ತನ್ನ ನ್ಯೂನತೆಗಳನ್ನು ಇತರರ ಮೇಲೆ ವರ್ಗಾಯಿಸಲು ಪ್ರಯತ್ನಿಸುವ ತಂತ್ರ
(ಎ) ದಮನ (ಬಿ) ಹಗಲುಗನಸು ಕಾಣುವಿಕೆ
(ಸಿ) ಪ್ರಕ್ಷೇಪಣೆ (ಡಿ) ತರ್ಕ ಸಮ್ಮತವಾಗಿಸುವಿಕೆ



Scanned by CamScanner

17. ಕಾರ್ಯಸರಣಿ ಬೋಧನೆಯು ಈ ತತ್ವಗಳನ್ನು ಅನ್ವಯಿಸಿ ರೂಪಿಸಲ್ಪಟ್ಟಿದೆ.
(ಎ) ಪ್ರಯತ್ನ ಮತ್ತು ಪ್ರಮಾದ ಕಲಿಕೆ (ಬಿ) ಸೋಪಾಧಿಕ ಅನುಬಂಧಿತ ಕಲಿಕೆ (ಸಿ) ಕ್ರಿಯಾಜನ್ಯ ಕಲಿಕೆ (ಡಿ) ಒಳನೋಟ ಕಲಿಕೆ
18. ಕಕ್ಷಿ ಕೇಂದ್ರಿತ ಆಪ್ತ ಸಲಹೆ ವಿಧಾನವು ಹೀಗೂ ಕರೆಯಲ್ಪಟ್ಟಿದೆ.
(ಎ) ನಿರ್ದೇಶಿತ ಆಪ್ತ ಸಲಹೆ (ಬಿ) ಅನಿರ್ದೇಶಿತ ಆಪ್ತ ಸಲಹೆ (ಸಿ) ಮಿಶ್ರ ಆಪ್ತ ಸಲಹೆ (ಡಿ) ಗುಂಪು ಆಪ್ತ ಸಲಹೆ
19. ಒಬ್ಬ ಹುಡುಗಿ ಒಂದು ಪುಟ್ಟ ಕಥೆಯನ್ನು ಓದುತ್ತಾಳೆ. ಅವಳು ಅದನ್ನು ಓದಿದ ನಂತರ ಕಥೆಯ ಕೊನೆಯಲ್ಲಿ ನೀಡಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುತ್ತಾಳೆ ಮತ್ತು ಆ ಕಥೆಯ ಮುಕ್ತಾಯ ಬೇರೆಯ ರೀತಿಯಲ್ಲಿ ಇರಬೇಕಿತ್ತೆಂದು ಅಪೇಕ್ಷಿಸುತ್ತಾಳೆ. ಇದು ವಿದ್ಯಾರ್ಥಿನಿಯ ಈ ವರ್ತನೆಯನ್ನು ತೋರಿಸುತ್ತದೆ.
(ಎ) ಕಥೆ ಓದುವುದರಲ್ಲಿ ಜಾಣತನ (ಬಿ) ಸೃಜನಶೀಲತೆ (ಸಿ) ತೆರೆದ ಮನಸ್ಸು (ಡಿ) ಬುದ್ಧಿವಂತಿಕೆ
20. ಒಬ್ಬ ಹುಡುಗ ಕಡಿಮೆ ಸ್ವಕೇಂದ್ರೀಕೃತ, ಕಡಿಮೆ ಆಕ್ರಮಣಕಾರಿ, ಕಡಿಮೆ ಸ್ವಾರ್ಥಿ ಮತ್ತು ಕಡಿಮೆ ಪರಾವಲಂಬಿ ಆದಾಗ ಆತನು ಈ ಬೆಳವಣಿಗೆಯನ್ನು ತಲುಪಿದ್ದಾನೆ ಎಂದು ತಿಳಿಯಬಹುದು.
(ಎ) ಭೌತಿಕ ಬೆಳವಣಿಗೆ (ಬಿ)ಭಾವನಾತ್ಮಕ ಬೆಳವಣಿಗೆ (ಸಿ) ಮಾನಸಿಕ ಬೆಳವಣಿಗೆ (ಡಿ) ಸಾಮಾಜಿಕ ಬೆಳವಣಿಗೆ
21. ಒಂದು ಮಗು ಒಂದು ಚಮಚವನ್ನು ಹಿಡಿದುಕೊಳ್ಳುವುದನ್ನು ಕಲಿತಾಗ, ಆತನು ಮುಂದೆ ಅದೇ ರೀತಿಯ ಉದ್ದದ ಮತ್ತು ತೆಳುವಾದ ವಸ್ತುಗಳನ್ನು ಹಿಡಿದುಕೊಳ್ಳಬಲ್ಲ. ಇದು ಮುಂದಿನ ಕಲಿಕೆಗೆ
(ಎ) ಸ್ವಾಂಗೀಕರಣವಾಗುತ್ತದೆ (ಬಿ) ಸ್ಥಳಾವಕಾಶವಾಗುತ್ತದೆ
(ಸಿ) ಸ್ಕೀಮಾ (ಮಾನಸಿಕ ಚಿತ್ರಣ)ವಾಗುತ್ತದೆ (ಡಿ) ಹೊಂದಾಣಿಕೆಯಾಗುತ್ತದೆ
22. ಕಲಿಕೆಯು ನಿಧಾನ ಗತಿಯಲ್ಲಿ ಸಾಗಿ ಅಂತಿಮವಾಗಿ ನಿಂತು ಹೋಗುವ ಮತ್ತೆ ಅದು ಮುಂದುವರಿಯುವ ಸಾಧ್ಯತೆ ಇಲ್ಲ ಎನಿಸುವ ಬಿಂದು
(ಎ) ಸಮತಲ (ಬಿ) ಆಸಕ್ತಿಯ ಕೊರತೆ (ಸಿ) ಬೇಸರ (ಡಿ) ಕಷ್ಟಕರ ಹಂತ
23. ಈ ಹಂತವನ್ನು ಕೂಟಯುಗ ಎಂದು ಕರೆಯುವರು.
(ಎ) ಶಾಲಾ ಪೂರ್ವ ಹಂತ (ಬಿ) ಉತ್ತರ ಬಾಲ್ಯ ಹಂತ (ಸಿ) ಅನ್ವೇಷಣಾ ಹಂತ (ಡಿ) ಪ್ರಶ್ನಿಸುವ ಹಂತ
24. ಒಬ್ಬ ಶಿಕ್ಷಕನು ತನ್ನ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯವನ್ನು ಕಾಪಾಡಲು ಕೈಗೊಳ್ಳಬೇಕಾದ ಕ್ರಮ
(ಎ) ಆಗಾಗ ಪ್ರವಾಸ ಕೈಗೊಳ್ಳುವುದು (ಬಿ) ವಿದ್ಯಾರ್ಥಿಗಳನ್ನು ಉನ್ನತ ಅಂಕ ಗಳಿಸುವಂತೆ ಪ್ರೋತ್ಸಾಹಿಸುವುದು
(ಸಿ) ಅನಾರೋಗ್ಯಕರ ಸ್ಪರ್ಧೆಗಳನ್ನು ತಡೆಗಟ್ಟುವುದು (ಡಿ) ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು
25. ಒಬ್ಬ ಹುಡುಗಿ ಒಂದು ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಆದರೆ ಆಕೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದನ್ನು ಬಿಟ್ಟು ಅಳಲು ಪ್ರಾರಂಭಿಸುತ್ತಾಳೆ. ಇದು ಸೂಚಿಸುವುದೇನೆಂದರೆ,
(ಎ) ಪಲಾಯನ (ಬಿ) ಹೊಂದಾಣಿಕೆ (ಸಿ) ಪ್ರತಿಗಮನ (ಡಿ) ನಕರಾತ್ಮಕತೆ
26. ಪ್ರೇರಣೆಯ ಪರಿಕಲ್ಪನೆಯನ್ನು ಸೂಕ್ತವಾಗಿ ಹೀಗೆ ವ್ಯಾಖ್ಯಾನಿಸಲಾಗಿದೆ.
(ಎ) ಹೆಚ್ಚು ವಸ್ತುಗಳನ್ನು ನೆನಪಿನಲ್ಲಿಟ್ಟುಕೊಳ್ಳುವ ಸಾಮರ್ಥ್ಯ (ಬಿ) ಹೆಚ್ಚು ಅಂಕಗಳನ್ನು ಗಳಿಸುವ ಸಾಮರ್ಥ್ಯ
(ಸಿ) ಮಾನ್ಯತೆ ಗಳಿಸುವ ಸಾಮರ್ಥ್ಯ (ಡಿ) ಅವನ/ಅವಳ ಗುರಿ ಸಾಧಿಸುವ ಸಾಮರ್ಥ್ಯ
27. ಶಿಕ್ಷಕರು ತನ್ನ ಮಕ್ಕಳನ್ನು ಗೃಹ ಕೈಗಾರಿಕಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನೇಯುವುದು, ಬುಟ್ಟಿ ಹೆಣೆಯುವುದು ಮತ್ತು ಆಟದ ಸಾಮಾನುಗಳನ್ನು ವೀಕ್ಷಿಸುತ್ತಾರೆ. ಶಿಕ್ಷಕರು ವಿದ್ಯಾರ್ಥಿಗಳ ವರ್ತನೆಯನ್ನು ಪರೀಕ್ಷಿಸುತ್ತಾರೆ. ಇದು ಇದಕ್ಕೆ ಉದಾಹರಣೆಯಾಗಿದೆ.
(ಎ) ಯಾದೃಚ್ಛಿಕ ಮೌಲ್ಯಮಾಪನ (ಬಿ) ಮೌಲ್ಯಮಾಪನ
(ಸಿ) ಪರಿಮಾಣಾತ್ಮಕ ಮೌಲ್ಯಮಾಪನ (ಡಿ) ಸಂಕಲನಾತ್ಮಕ ಮೌಲ್ಯಮಾಪನ
28. ತರಗತಿಯ ಪ್ರತಿ ಮಗುವಿಗೆ ವಿವಿಧ ಸನ್ನಿವೇಶಗಳಿರುವ ಕಾರ್ಡ್‌ಗಳನ್ನು ಕೊಡಲಾಗುತ್ತದೆ. ಪ್ರತಿ ಮಗುವೂ ಈ ಸನ್ನಿವೇಶವನ್ನು ಕುರಿತು ಕಥೆಯನ್ನು ಹೆಣೆಯಬೇಕಾಗುತ್ತದೆ ಮತ್ತು ಈ ಕಥೆಯನ್ನಾಧರಿಸಿ ಶಿಕ್ಷಕನು ವಿದ್ಯಾರ್ಥಿಯ ವರ್ತನೆಯನ್ನು ಅರ್ಥ ಮಾಡಿಕೊಳ್ಳುತ್ತಾನೆ. ಈ ತಂತ್ರವು
(ಎ) ಸಂದರ್ಶನ (ಬಿ) ಪ್ರಕ್ಷೇಪಣಾ ತಂತ್ರ (ಸಿ) ವೀಕ್ಷಣೆ (ಡಿ) ಆಪ್ತ ಸಲಹೆ
29. ಸಂವೇಗ ಪ್ರತಿನಿಧಿಸುವುದು
(ಎ) ಕದಡು (ಬಿ) ಪ್ರತಿಭಟಿಸು (ಸಿ) ಚಲಿಸು (ಡಿ) ಬೆಳೆಸು
30. ಗುಂಪಿನಲ್ಲಿ ವ್ಯಕ್ತಿಯ ಸ್ಥಾನವನ್ನು ಅಳೆಯುವ ಸೂಕ್ತವಾದ ವಿಧಾನ
(ಎ) ಸಾಂದರ್ಭಿಕ ಪರೀಕ್ಷೆಗಳು (ಬಿ) ಮಾನಸಿಕ ಪರೀಕ್ಷೆಗಳು (ಸಿ) ಸಮಾಜಮಿತಿ ತಂತ್ರ (ಡಿ) ಚಿಕಿತ್ಸಾ ಸಂದರ್ಶನಗಳು

**ಕೀ – ಉತ್ತರಗಳು**

| | | | | | |
|---|---|---|---|---|---|
| 1 | ಸಿ | 11 | ಡಿ | 21 | ಬಿ |
| 2 | ಸಿ | 12 | ಎ | 22 | ಎ |
| 3 | ಡಿ | 13 | ಸಿ | 23 | ಬಿ |
| 4 | ಸಿ | 14 | ಎ | 24 | ಸಿ |
| 5 | ಸಿ | 15 | ಎ | 25 | ಸಿ |
| 6 | ಡಿ | 16 | ಸಿ | 26 | ಡಿ |
| 7 | ಎ | 17 | ಸಿ | 27 | ಸಿ |
| 8 | ಡಿ | 18 | ಬಿ | 28 | ಬಿ |
| 9 | ಸಿ | 19 | ಬಿ | 29 | ಎ |
| 10 | ಸಿ | 20 | ಡಿ | 30 | ಸಿ |



Scanned by CamScanner